**ಪತ್ರಿಕಾ ಪ್ರಕಟಣೆ**

ವಿಜಯಪುರ

ದಿನಾಂಕ: 06.06.2021.

**1] ವಿಜಯಪುರ ಗ್ರಾಮೀಣ ಪೊಲೀಸ ಠಾಣೆ ಗುನ್ನೆ ನಂ: 153/2021 ಕಲಂ: 279, 304(ಎ) ಐಪಿಸಿ**

ದಿನಾಂಕ 05.06.2021 ರಂದು 16.30 ಗಂಟೆಗೆ ಸುಮಾರಿಗೆ ಇದರಲ್ಲಿಯ ಆರೋಪಿತನಾದ ರಾಜೇಸಾಬ ಮೋದಿನಸಾಬ ಅತ್ತಾರ, ಸಾ: ಅಥರ್ಗಾ ಈತನು ತಾನು ನಡೆಯಿಸುತ್ತಿದ್ದ ಮೋಟಾರ್ ಸೈಕಲ್ ನಂ ಜಿ.ಎ:03 ಬಿ:6975 ನೇದನ್ನು ಅಥರ್ಗಾ ಕಡೆಯಿಂದ ವಿಜಯಪುರ ಕಡೆಗೆ ಅತೀ ಜೋರಾಗಿ ಮತ್ತು ನಿರ್ಲಕ್ಷತನದಿಂದ ನಡೆಯಿಸಿಕೊಂಡು ಬಂದು ನಾಗಠಾಣ ಗ್ರಾಮದ ಹದ್ದಿಯ ಗುಣಕಿ ಇವರ ಜಮೀನದ ಹತ್ತಿರ ರಸ್ತೆ ಮೇಲೆ ಬಿದ್ದಿದ್ದ ಕಲ್ಲಿಗೆ ಹಾಯಿಸಿ ಅಪಘಾತಪಡಿಸಿ ಸ್ಕಿಡ್ ಆಗಿ ಬಿದ್ದು ತನ್ನ ತಲೆಗೆ. ಮುಖಕ್ಕೆ, ಮೈಕೈಗೆ ಭಾರಿಗಾಯ ಪೆಟ್ಟುಹೊಂದಿ ಸ್ಥಳದಲ್ಲಿಯೇ ತೀರಿಕೊಂಡಿರುತ್ತಾನೆ ಈ ಬಗ್ಗೆ ಮಹಿಬೂಬ ತಂದೆ ರಾಜೇಸಾಬ ಅತ್ತಾರ ಸಾ: ಅಥರ್ಗಾ ತಾ: ಇಂಡಿ ಕೊಟ್ಟ ಮೇರೆಗೆ ದಿನಾಂಕ: 05.06.2021 ರಂದು ವಿಜಯಪುರ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**2] ಗಾಂಧಿ ಚೌಕ ಪೊಲೀಸ ಠಾಣೆ ಗುನ್ನಾ. ನಂ: 129/2021 ಕಲಂ– 188, 269 ಐಪಿಸಿ 87 ಕೆ ಪಿ ಆ್ಯಕ್ಟ್**

ದಿನಾಂಕ 05.06.2021 ರಂದು 16.00 ಗಂಟೆಗೆ. ಸುಮಾರಿಗೆ ಇದರಲ್ಲಿ ಆರೋಪಿತರಾದ 1] ಇರ್ಶಾದ ಮೊಹಮ್ಮದಹುಸೇನ ಮಂಚನಕೊಪ್ಪ ವಯಾ; ಸಾ॥ ಜೆ ಎಮ್ ರೋಡ ಬಡಿಕಮಾನ ನಾಗರಬಾವಡಿ ಹಾಗೂ ಇನ್ನೂ 9 ಜನರು ಕೂಡಿಕೊಂಡು ವಿಜಯಪುರ ಶಹರದ ಲಕ್ಷ್ಮಿ ಚಾಳ ಅಲಂಕಾರ ಟಾಕಿಜ್ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಕೂತು ಈಗ ಕೊರೊನಾ ವೈರಸ್/ಕೋವಿಡ್–19 ಸಾಂಕ್ರಾಮಿಕವಾಗಿ ಹರಡದಂತೆ ತಡೆಗಟ್ಟುವ ಮತ್ತು ಅಪಾಯಕಾರಿ ಸಾಂಕ್ರಾಮಿಕ ರೋಗವನ್ನು ತಡೆಗಟ್ಟುವ ನಿಟ್ಟಿನಲ್ಲಿ ಮತ್ತು ಸಾರ್ವಜನಿಕರ ಹಿತದೃಷ್ಟಿಯನ್ನು ಕಾಯ್ದುಕೊಳ್ಳಲು ಮುಂಜಾಗೃತ ಕ್ರಮವಾಗಿ ಕರ್ನಾಟಕ ಸರ್ಕಾರ ನಿಷೇಧದ ಆದೇಶ ಹೊರಡಿಸಿದ್ದರೂ ಸಹ ತಿಳಿದೂ ತಿಳಿದೂ ಸೇರಿಕೊಂಡು ದೈಹಿಕ ಅಂತರ ಕಾಯ್ದುಕೊಳ್ಳದೆ ಎಲ್ಲರೂ ಕುಡಿಕೊಂಡು ಇಸ್ಪೇಟ ಎಲೆಗಳ ಸಹಾಯದಿಂದ ತಮ್ಮ ತಮ್ಮ ಪಾಯಿದೆಗೊಸ್ಕರ ಪಣಕ್ಕೆ ಹಣ ಹಚ್ಚಿ ಅಂದರ ಬಾಹರ ಅಂಬುವ ಇಸ್ಪೇಟ್ ಮನ್ನಾ ಜೂಜಾಟ ಆಡುವಾಗ ಸಿಕ್ಕ ಅಪರಾದ. ಈ ಬಗ್ಗೆ ಸ:ತ ಶರಣಗೌಡ ಬಿ ಗೌಡರ [ಕಾ&ಸು] ಗಾಂಧಿಚೌಕ ಪೊಲೀಶ್ ಠಾಣೆ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 05.06.2021 ರಂದು ಗಾಂಧಿ ಚೌಕ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**3] ಗಾಂಧಿ ಚೌಕ ಪೊಲೀಸ ಠಾಣೆ ಗುನ್ನಾ. ನಂ: 128/2021 ಕಲಂ– 78[3] ಕೆ ಪಿ ಆ್ಯಕ್ಟ್**

ದಿನಾಂಕ 05.06.2021 ರಂದು 10;30 ಗಂಟೆಯ ಸುಮಾರಿಗೆ ಇದರಲ್ಲಿ ಆರೋಪಿತರಾದ 1] ಮೈಹಿಬೂಬ ಹಸನಸಾಬ ಟಾಕಳಿ ಸಾ; ನೇಹರುನಗರ ವಿಜಯಪುರ 2] ಅಬ್ದುಲರಹಮಾನ ಸೈಫನ ಆಲಮೇಲ ಇವರು ತಮ್ಮ ತಮ್ಮ ಪಾಯ್ದೆಗೋಸ್ಕರ್ ವಿಜಯಪುರ ಶಹರದ ಗ್ಯಾಂಗಬಾವಡಿ ಅಷ್ಠಲಕ್ಷ್ಮಿ ದೇವಸ್ಥಾನ ಹತ್ತಿರ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ನಿಂತು 1 ರೂಗೆ 80 ರೂ ಕೊಡುವ ಕರಾರಿನ ಮೇಲೆ ಅಂಕಿ ಸಂಖ್ಯೆಗಳ ಸಹಾಯದಿಂದಾ ಜನರಿಂದ ಹಣ ಪಡೆದುಕೊಂಡು ಕಲ್ಯಾಣ ಮಟಕಾ ಅಂಬುವ ಓ.ಸಿ. ಜೂಜಾಟದಲ್ಲಿ ತೊಡಗಿದಾಗ ಸಿಕ್ಕ ಅಪರಾಧ ಈ ಬಗ್ಗೆ ಸ:ತ ರವೀಂದ್ರ ಕೆ ನಾಯ್ಕೋಡಿ ಪೊಲೀಸ್ ಇನ್ಸಪೆಕ್ಟರ್ ಗಾಂಧಿಚೌಕ ಪೊಲೀಸ್ ಠಾಣೆ ವಿಜಯಪುರ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 05.06.2021 ರಂದು ಗಾಂಧಿ ಚೌಕ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**4] ಬಸವನ ಬಾಗೇವಾಡಿ ಪೊಲೀಸ ಠಾಣೆ ಗುನ್ನಾ. ನಂ: 93/2021 ಕಲಂ 188, 269, 271, ಐಪಿಸಿ ಮತ್ತು ಕಲಂ. 87 ಕೆ.ಪಿ ಆ್ಯಕ್ಟ**

ದಿನಾಂಕ 05.06.2021 ರಂದು: 18:00 ಗಂಟೆಯ ಸುಮಾರಿಗೆ ಇದರಲ್ಲಿ ಆರೋಪಿತರಾದ 1] ಸಂಜು ಶಿವಪ್ಪ ಲಮಾಣಿ 2] ಶಿವಾಜಿ ಗುರಪ್ಪ ಚವ್ಹಾಣ 3] ವಿಲಾಸ ಬಾಸು ರಾಠೋಡ ಸಾ: ಎಲ್ಲರೂ ಕರಹಳ್ಳ ತಾಂಡಾ. ಇವರು ಕರಿಹಳ್ಳ ತಾಂಡಾದ ಸೇವಾಲಾಲ ಗುಡಿಯ ಮುಂದೆ ಸಾರ್ವಜನಿಕ ಸ್ಥಳದಲ್ಲಿ ಆರೋಪಿತರು ಪ್ರಸ್ತುತ ಕರೋನಾ ಸಾಮಕ್ರಾಮಿಕ ರೋಗವು [ಕೋವಿಡ್–19] ವ್ಯಾಪಕವಾಗಿ ಹರಡುತ್ತಿದ್ದರಿಂದ ಮಾನ್ಯ ಕರ್ನಾಟಕ ಸರ್ಕಾರವು ಸಾರ್ವಜನಿಕ ಅತ್ಯವಶ್ಯಕ ಮಳಿಗೆಗಳನ್ನು ಹೊರತು ಪಡಿಸಿ ಎಲ್ಲಾ ವಸ್ತುಗಳ ಅಂಗಡಿಗಳು ತೆರೆಯಬಾರದು ಅಂತಾ ಮತ್ತು ಸಾರ್ವಜನಿಕ ಸ್ಥಳಗಲ್ಲಲಿ ಯಾವುದೇ ಚಟುವಟಿಕೆ ಕೈಕೊಳ್ಳದಂತೆ ಹಾಗೂ ಜನರು ಕೂಡದಂತೆ, ಸಾಮಾಜಿಕ ಅಂತರ ಕಾಯ್ದುಕೊಳ್ಳುವಂತೆ, ಕರ್ನಾಟಕ ಸರಕಾರದ ಆದೇಶವಿದ್ದರೂ ಸಹ ಅಪಾಯಕಾರಿ ಸಾಂಕ್ರಾಮೀಕ ರೋಗ ಹರಡುವಿಕೆ ಬಗ್ಗೆ ನಿರ್ಲಕ್ಷ ವಹಿಸಿ ಮಾನ್ಯ ಕರ್ನಾಟಕ ಸರಕಾರದ ಆದೇಶವನ್ನು ಉಲ್ಲಂಘನೆ ಮಾಡಿ ತಮ್ಮ ತಮ್ಮ ಪಾಯಿದೆಗೊಸ್ಕರ ಇಸ್ಪೇಟ ಎಲೆಗಳ ಸಹಾಯದಿಂದ ಅಂದರ ಬಾಹರ ಅಂಬುವ ಮನ್ನಾ ಜೂಜಾಟ ಆಡುತ್ತಿದ್ದಾಗ ಕೆಲವು ಜನರು ಸಲಕರಣೆಗಳ ಸಮೇತ ಸಿಕ್ಕಿದ್ದು, ಈ ಬಗ್ಗೆ ಸ:ತ: ಬಸವರಾಜ ಎಮ್ ಪಾಟೀಲ ಪೊಲೀಸ ಇನ್ಸಪೆಕ್ಟರ. ಬಸವನ ಬಾಗೇವಾಡಿ ಠಾಣೆ. ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ 05.06.2021 ರಂದು ಬ ಬಾಗೇವಾಡಿ ಪೊಲೀಸ ಠಾಣೆಯಲ್ಲಿ ಪ್ರಕರಣವು ದಾಖಲಾಗಿರುತ್ತದೆ.